ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚಾಕವೇಲು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಅವ್ಯವಸ್ಥೆ

135 (123) : ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕು ಚಾಕವೇಲು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೆಂದ್ರ ವಿರುವುದು ಸರ್ಕಾರಕ್ಕೆ ಅರಿವಿದೆಯೇ;

ಆ) ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಸೇರಿ ಇತರೆ ಸಿಬ್ಬಂದಿ ವರ್ಗದವರು ಎಷ್ಟು ಇರಬೇಕು ಹಾಗೂ ಹಾಲಿ ಇರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು;

ಇ) ಈ ಪ್ರಾಥಮಿಕ ಆರೋಗ್ಯ ಕೆಂದ್ರದಲ್ಲಿ ವೈದ್ಯರು ಹಾಗೂ ಇತರೆ ಸಿಬ್ಬಂದಿ ವರ್ಗದವರು ಇಲ್ಲದೆ ಗ್ರಮಸ್ಥರು ಆರೋಗ್ಯ ಕೆಂದ್ರದ ಅವ್ಯವಸ್ಥೆಗೆ ಧರಣಿ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಬಂದಿದ್ದರೆ, ಕೈಗೊಂಡ ಕ್ರಮ ಏನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇದೆ.

ಆ) ವೈದ್ಯರು ಸೇರಿ ಇತರೆ ಸಿಬ್ಬಂದಿಗಳ ಮಂಜೂರಾತಿ ಸಂಖ್ಯೆ : 6
ಈಗ ಕಾರ್ಯನಿರ್ವಹಿಸುತ್ತಿರುವರು ಸಂಖ್ಯೆ : 3

ಇ) ಪ್ರಾಥಮಿಕ ಆರೋಗ್ಯ ಕೇಂದ್ರ ಚಾಕವೇಲು ಇಲ್ಲಿಗೆ ಡಾ॥ ಅರುಣಕುಮಾರ್ ಗುತ್ತಿಗೆ ವೈದ್ಯರು ಪ್ರಾಥಮಿಕ ಆರೋಗ್ಯ ಕೇಂದ್ರ ಜಿ. ಮುದ್ದೇಪಲ್ಲಿ ಕ್ರಾಸ್ ಇವರನ್ನು ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಮತ್ತು ಡಾ॥ ಪ್ರಕಾಶ್ ಗುತ್ತಿಗೆ ವೈದ್ಯರು ಪ್ರಾಥಮಿಕ ಆರೋಗ್ಯ ಕೆಂದ್ರ ಬೆಳ್ಳೂರು, ಇವರನ್ನು ಪ್ರತಿ ಗುರುವಾರ ಹಾಗೂ ಸೋಮವಾರಗಳಂದು ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.

ಕಿಮ್ಸ್ ಆಸ್ಪತ್ರೆಯಲ್ಲಿನ ಕೋಬಾಲ್ಟ್ ಮೆಶೀನ್

137 (161) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿಯಲ್ಲಿರುವ ಕೋಬಾಲ್ಟ್ ಮೆಶಿನ್ ಸರಿಯಿದೆಯೇ;

ಆ) ಒಬ್ಬ ರೋಗಿಗೆ ಕೋಬಾಲ್ಟ್ ಮೆಶೀನ್‌ನಲ್ಲಿ ಚಿಕಿತ್ಸೆ ನೀಡಲು ಎಷ್ಟು ಶುಲ್ಕ ಪಡೆಯಲಾಗುತ್ತಿದೆ; ಇದರಲ್ಲಿ ಹಣದ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಬಂದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; ಪ್ರತಿಯೊಬ್ಬ ಬಡರೋಗಿಗೆ ಇದರ ಉಪಯೋಗ ಸಿಗುವಂತೆ ಕೈಗೊಂಡ ಕ್ರಮವೇನು?

ಶ್ರೀ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಹಾಗೂ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು) :

ಅ) ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿರುವ ಕೋಬಾಲ್ಟ್ ಯಂತ್ರ ಸರಿಯಾಗಿದೆ. ಇದು 10.10.96ರಿಂದ ಕಾರ್ಯನಿರ್ವಹಿಸುತ್ತಿದೆ. ವಿಕಿರಣ ಮೂಲ ಸಾಮರ್ಥ್ಯ ಕಡಿಮೆಯಾಗಿದ್ದರಿಂದ ಮುಂಬೈನ ಬಿ.ಎ.ಆರ್.ಸಿ. ಇವರು ವಿಕಿರಣ ಮೂಲವನ್ನು ತಾ: 2003 ರ ಡಿಸೆಂಬರ್ 13 ರಿಂದ 17ರವರೆಗೆ ಅಳವಡಿಸಿದ್ದಾರೆ 2003ರ ಡಿಸೆಂಬರ್ 27 ಹಾಗೂ 28ರಂದು ಕೋಬಾಲ್ಟ್ ಘಟಕದ ಕ್ಯಾಲಿಬ್ರೇಶನ್

ಕಾರ್ಯವನ್ನು ನಡೆಸಲಾಗಿದೆ. ಚಿಕಿತ್ಸೆ ಪ್ರಾರಂಭಿಸಲು ಬಾಬಾ ಅಣು ಸಂಶೋಧನಾ ಕೇಂದ್ರದ ಅನುಮತಿಗಾಗಿ ಕಾಯಲಾಗುತ್ತಿದೆ. ಆದ್ದರಿಂದ ಕೋಬಾಲ್ಟ್ ಮೆಶೀನ್ ಸರಿಯಾಗಿ ಇದ್ದರೂ ಸಹ ವಿಕಿರಣ ಮೂಲವನ್ನು ಅಳವಡಿಸುತ್ತಿರುವುದರಿಂದ ಹಗೂ ಅನುಮತಿ ಪಡೆಯಲಾಗುತ್ತಿರುವುದರಿಂದ ತಾತ್ಕಾಲಿಕವಾಗಿ ಚಿಕಿತ್ಸೆಯನ್ನು ನೀಡುತ್ತಿಲ್ಲ. ಬಾಬ ಅಣು ಸಂಶೋಧನಾ ಸಂಸ್ಥೆಯ ಅನುಮತಿ ಪಡೆದ ತಕ್ಷಣ ಚಿಕಿತ್ಸೆಯನ್ನು ಪುನರಾರಂಭಿಸಲಾಗುವುದು.

ಆ) ಸ್ಪೆಷಲ್ ವಾರ್ಡಿನ ಕ್ಯಾನ್ಸರ್ ರೋಗಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕ್ಯಾನ್ಸರ್ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಸ್ಪೆಷಲ್ ವಾರ್ಡ್ ಕೆಸುಗಳಿಗೆ ಪ್ರತಿ ಚಿಕಿತ್ಸೆಗೆ ಮೂವತ್ತು ರೂ.ಗಳ ಶುಲ್ಕ ವಿಧಿಸಲಾಗುತ್ತಿದೆ. ಇಲ್ಲಿಯವರೆಗೆ ಮೌಖಿಕವಾಗಿ ಅಥವಾ ಲಿಖಿತವಾಗಿ ಈ ವಿಭಾಗದ ಮೇಲೆ ಯಾವುದೇ ದೂರುಗಳು ಬಂದಿಲ್ಲ. ಹಣದ ಅವ್ಯವಹಾರ ನಡೆಯುತ್ತಿರುವುದಿಲ್ಲ.

ಇ) ಕೋಬಾಲ್ಟ್ ಯಂತ್ರದ ಮೂಲಕ ಚಿಕಿತ್ಸೆಗೆ ಯಾವುದೇ ಹಣದ ಅವ್ಯವಹಾರ ನಡೆಯದೆ ಇರುವುದರಿಂದ ಯಾವುದೇ ಕ್ರಮ ಬೇಕಿಲ್ಲ. ಇಲ್ಲಿಯವರೆಗೆ ಕ್ಯನ್ಸರ್ ಚಿಕಿತ್ಸೆಗೆ ಬಂದ ಬಡ ರೋಗಿಗಳಿಗೆ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ 90 ರೋಗಿಗಳಿಗೆ 5.09.591–00 ರೂ.ಗಳನ್ನು ಪರಿಹಾರವಾಗಿ ನೀಡಲಾಗಿದೆ.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ

139 (10) : ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಶಾಲೆಗಳಲ್ಲಿ ಇರಬೇಕಾದ ವಿದ್ಯಾರ್ಥಿಗಳ ಕನಿಷ್ಟ ಸಂಖ್ಯೆ ಎಷ್ಟು;

ಆ) ಅದಕ್ಕಿಂತ ಕಡಿಮೆ ಸಂಖ್ಯೆ ಇದ್ದಲ್ಲಿ ಹೊಸ ಶಾಲೆಗಳು ತೆರೆಯಲು ಅವಕಾಶ ಇದೆಯೇ;

ಇ) ಪ್ರತಿ ಶಾಲೆಗೆ ಇರಬೇಕಾದ ಅಂತರವೆಷ್ಟು; (ಖಾಸಗಿ ಅಥವಾ ಸರ್ಕಾರಿ)

ಈ) ನಿಯಮ ಉಲ್ಲಂಘಿಸಿದ ಶಾಲೆಗಳು ಉಡುಪಿ ಜಿಲ್ಲೆಯಲ್ಲಿ ಎಷ್ಟಿವೆ;

ಉ) ನಿಯಮ ಉಲ್ಲಂಘಿಸಿದ ಶಾಲೆಗಳಿಗೆ ಸರ್ಕಾರ ಪರವಾನಿಗೆ ನೀಡಿದೆಯೇ; ನೀಡಿದ್ದಲ್ಲಿ ತಾರತಮ್ಯ ಏಕೆ?

ಪ್ರೋ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಸರ್ಕಾರಿ ಪ್ರೌಢಶಾಲೆಗಳಿಗೆ ಕನಿಷ್ಠ 50 ವಿದ್ಯಾರ್ಥಿಗಳು ಹಾಗೂ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಕನಿಷ್ಠ 20 ವಿದ್ಯಾರ್ಥಿಗಳು ಇರಬೇಕು.

ಆ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಭೌಗೋಳಿಕ ಮತ್ತು ನೈಸರ್ಗಿಕ ಅಡಚಣೆಗಳಾದಂತಹ ಬೆಟ್ಟ ಗುಡ್ಡ, ನದಿ ತೀವ್ರತರವಾದ ಕಾಡು ಪ್ರದೇಶವಿದ್ದಲ್ಲಿ ಮಕ್ಕಳ ಸಂಖ್ಯೆ 20 ಕ್ಕಿಂತ ಕಡಿಮೆ ಇದ್ದರೂ ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ 25 ಕ್ಕಿಂತ ಕಡಿಮೆ ಇದ್ದರೂ ಪ್ರಾರಂಭಿಸಲು ಅವಕಾಶವಿದೆ.

ಇ) ಸರ್ಕಾರಿ ಪ್ರೌಢಶಾಲೆಗಳಿಗೆ 5 ಕಿ.ಮೀ., ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 1 ಕಿ.ಮೀ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 3 ಕಿ.ಮೀ. ಅಂತರವಿರಬೇಕು. ಆದರೆ, ಇದು ಹೆಚ್ಚು ಜನಸಂದಣಿ ಇರುವ ನಗರ ಪ್ರದೇಶಕ್ಕೆ ಅನ್ವಯಿಸುವುದಿಲ್ಲ. ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಿಗೆ ಅಂತಹ ಅವಶ್ಯಕತೆ ಇರುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.